**ಓ ಎಸ್ ನಂಃ 406/2014**
**ಪಿ.ಡಬ್ಲ್ಯೂ -2**
**ದಿನಾಂಕಃ 20.01.2026**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 5 , 7 ರಿಂದ 9 ರವರ ಪರ ಶ್ರೀ ಆರ್ ಎಂ ಓ ವಕೀಲರಿಂದಃ**

ನನ್ನ ಸ್ವಂತ ಊರು ಕೆಂಕೆರೆ. ನಾನು ಸುಮಾರು 25 ವರ್ಷಗಳಿಂದ ಹಿರಿಯೂರಿನಲ್ಲಿ ವಾಸವಾಗಿದ್ದೇನೆ . ಪ್ರತಿವಾದಿ 1 ರಿಂದ 3 ನನ್ನ ಅಣ್ಣನ ಹೆಂಡತಿ ಮತ್ತು ಮಕ್ಕಳು ಆಗಿರುತ್ತಾರೆ. ಸದರಿ ದಾವೆಯಲ್ಲಿ ನಾನು 4 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ಸರಿ. 5 ರಿಂದ 9 ನೇ ಪ್ರತಿವಾದಿಯರು ನನ್ನ ತಂಗಿಯಂದಿರು. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಬರೆಸಿರುವುದಿಲ್ಲ. ನನ್ನ ತಂದೆ ಬೈರಪ್ಪ ನವರಿಗೆ ಅಂದಾಜು 50 ಎಕರೆ ಆಸ್ತಿ ಇತ್ತು. ನಾನು ಮತ್ತು ತಿಪ್ಪೇಸ್ವಾಮಿ ಇಬ್ಬರೇ ಗಂಡು ಮಕ್ಕಳು ಎಂದರೆ ಸರಿ. ನಾನು ಮತ್ತು ನನ್ನ ಸಹೋದರ ಬೇರೆಯಾಗಿ ಸುಮಾರು 20 ವರ್ಷ ಆಗಿರಬಹುದು. ನಿಮಗೆ ವಿಭಾಗದಲ್ಲಿ ಎಷ್ಟು ಪಾಲು ಬಂದಿರುತ್ತದೆ ಎಂದರೆ ಸಾಕ್ಷಿಯು ನಾವು ಇದುವರೆಗೂ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ . ಈಗ ನೀವು ಜಮೀನನ್ನು ಒಟ್ಟಾಗಿ ಅನುಭಸುತ್ತಿದ್ದೀರಾ ಎಂದರೆ ಸಾಕ್ಷಿಯು ಅವರು ಅರ್ದ ನಾನು ಅರ್ಧ ಅನುಭವಿಸುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಅಂದಾಜು 20 ಎಕರೆ ಇರಬಹುದು. ನಾನು ಮತ್ತು ತಿಪ್ಪೇಸ್ವಾಮಿ ಯಾವುದೇ ನೊಂದಣಿ ವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ. ದಾವಾ ಸ್ವತ್ತನ್ನು ಹೊರುತುಪಡಿಸಿ ನಾನು ಹೇಳಿದ 20 ಎಕರೆ ಆಗಿರುತ್ತದೆ. ದಾವಾ ಸ್ವತ್ತು ಸರ್ವೇ ನಂ. 107/1 ಮತ್ತು 2 ರಲ್ಲಿ ಒಟ್ಟು 12 ಚಿಲ್ಲರೆ ಎಕರೆಗೆ ಸಂಬಂಧಿಸಿದ ಜಮೀನು ಆಗಿರುತ್ತದೆ ಎಂದರೆ ಸರಿ . ನಿಮಗೆ

ಇರುವಂತಹ 20 ಎಕರೆಯಲ್ಲಿ ನಿಮ್ಮ ಸಹೋದರಿಯರಿಗೆ ವಿಭಾಗ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯು ಜೀವಂತ ಇರುವಾಗ ತಲಾ 2-2 ಎಕರೆಯಂತೆ ಅಂದರೆ ದಾವಾ ಸ್ವತ್ತನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಯಾವ ರೀತಿಯಾಗಿ ನಿಮ್ಮ ತಂದೆಯವರು ಹೆಣ್ಣು ಮಕ್ಕಳಿಗೆ ಸ್ವತ್ತನ್ನು ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ . ನಿಮ್ಮ ಅಣ್ಣ ಮತ್ತು ನಿಮ್ಮ ತಂದೆಯವರು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ . ನನ್ನ ತಂದೆ ಮತ್ತು ನನ್ನ ಅಣ್ಣ ದಿಃ 23.01.1992 ಮತ್ತು ದಿಃ 16.12.1991 ರಂದು ದಾನ ಪತ್ರಗಳನ್ನು ಹೆಣ್ಣು ಮಕ್ಕಳ ಪರವಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ನೊಂದಣಿ ಮಾಡಿಸಲು ಸಾದ್ಯವಾಗಿರುವುದಿಲ್ಲ ಏಕೆಂದರೆ 1995 ರಲ್ಲಿ ನಿಮ್ಮ ತಂದೆಯವರು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನಪತ್ರಗಳು ಸುಳ್ಳು ಎಂದು ನೀವು ತಕರಾರು ಸಲ್ಲಿಸಿರುತ್ತೀರಾ ಎಂದರೆ ನಾನು ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತುಗಳಿಗೆ ಕಂದಾಯವನ್ನು ಪಾವತಿಸಿರುವುದಿಲ್ಲ ಎಂದು ಸರ್ಕಾರಕ್ಕೆ ಪಡವನ್ನು ಹಾಕಿಕೊಳ್ಳಲಾಗಿತ್ತು ಎಂದರೆ ಸುಳ್ಳು. 5 ರಿಂದ 9 ನೇ ಪ್ರತಿವಾದಿ ಸರ್ಕಾರಕ್ಕೆ ಪಡವನ್ನು ಪಾವತಿ ಮಾಡಿ ದಾವಾ ಸ್ವತ್ತನ್ನು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು. ನಂತರ ಮ್ಯೂಟೇಷನ್ 1997-1998 ರಲ್ಲಿ 5 ರಿಂದ 9 ನೇ ಪ್ರತಿವಾದಿಗಳ ಪರವಾಗಿ ಆಗಿರುತ್ತದೆ ಎಂದರೆ ಸರಿಯಲ್ಲ.

1998 ರಲ್ಲಿ 9 ನೇ ಪ್ರತಿವಾದಿಯ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ದಿಃ 23.01.1998 ರಂದು 9 ನೇ ಪ್ರತಿವಾದಿಗೆ ಮದುವೆಯಾಗದ ಕಾರಣ ಎಲ್ಲ ಅಕ್ಕ ತಂಗಿಯಂದಿರು ಸೇರಿ

2 ಎಕರೆ 13 ಗುಂಟೆ ಸ್ವತ್ತನ್ನು 9 ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. 1998 ರಿಂದ 5 ರಿಂದ 8 ನೇ ಪ್ರತಿವಾದಿಯರಿಗೆ ತಲಾ 2-2 ಎಕರೆಯಂತೆ ಹಾಗೂ 9 ನೇ ಪ್ರತಿವಾದಿಗೆ 4 ಎಕರೆ 13 ಗುಂಟೆ ಬಂದಿರುತ್ತದೆ ಎಂದರೆ ಸುಳ್ಳು. 9 ನೇ ಪ್ರತಿವಾದಿಯು 4 ಎಕರೆ 13 ಗುಂಟೆಜಾಗದಲ್ಲಿ ಬೋರ್ ವೆಲ್ ಹಾಕಿಸಿ ತೋಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಮಾಡಿರಬಹುದು ಎಂದು ನುಡಿದಿರುತ್ತಾರೆ .

1 ಮತ್ತು ನೇ ವಾದಿಯವರು ನನ್ನ ಅಕ್ಕನ ಮಕ್ಕಳು. ಸಿದ್ದರಂಗಮ್ಮ ಎನ್ನುವವರನ್ನು ನಾಕಿಕೆರೆ ಗ್ರಾಮಕ್ಕೆ ವಿವಾಹ ಮಾಡಿಕೊಡಲಾಗಿರುತ್ತದೆ. ವಿವಾಹವಾದ ಕೆಲವೆ ದಿನಗಳಲ್ಲಿ ಅವರುಗಂಡನ ಮನೆಯನ್ನು ತೊರೆದ ಕೋಡಿಹಳ್ಳಿ ರಂಗಪ್ಪ ಎನ್ನುವವರೊಂದಿಗೆ ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ . ಅವರು ಗಂಡನನ್ನು ತೊರೆದು ಬೇರೆ ವಿವಾಹವಾಗಿರುವ ಕಾರಣ ನನ್ನ ತಂದೆಯವರು ಯಾವುದೇ ಆಸ್ತಿಯನ್ನು ಅವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಿದ್ದರಂಗಮ್ಮ ಅಂದರೆ ನಿಮ್ಮ ಮೊದಲನೇ ಅಕ್ಕ ಇವರು ಬದುಕಿರುತ್ತಾರಾ ಅಥವಾ ಮರಣ ಹೊಂದಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು 20 ವರ್ಷಗಳಿಂದ ಅವರನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿ 1 ಮತ್ತು ನನ್ನ ಬಳಿ ಬಂದು ಆಸ್ತಿಯಲ್ಲಿ ವಿಭಾಗ ಕೊಡಿಸುವಂತೆ ಕೇಳಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಮಗೆ ಬಂದಿರುವ 20 ಎಕರೆಯಲ್ಲಿ ಅವರಿಗೆ ವಿಭಾಗವನ್ನು ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಬರಬೇಕಾದ 2 ಎಕರೆ ಆಸ್ತಿಯಲ್ಲಿ ಅವರ ಭಾಗ ಕೇಳಿರುತ್ತಾರೆ ಎಂದು ನುಡಿದಿರುತ್ತಾರೆ . 1 ಮತ್ತು 2 ನೇ ವಾದಿಯವರು ಸಿದ್ದರಂಗಮ್ಮಮಕ್ಕಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಅವರಿಗೆ ಯಾವುದೇ ಹಕ್ಕು

ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿಗಳನ್ನು ನಾನು ನೋಡಿಲ್ಲ. ಈಶ್ವರ ದೇವಸ್ಥಾನಕ್ಕೆ 13 ಗುಂಟೆಯನ್ನು ಬಿಟ್ಟಿರುವುದಕ್ಕೆ ಸಂಬಂದಿಸಿದಂತೆ ಪಹಣಿ ನೋಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ತಂದೆಯವರು ಬಿಟ್ಟಿರುತ್ತಾರೆ ನಾನು ಪಹಣಿಯನ್ನು ನೋಡಿಲ್ಲ ಎಂದು ನುಡಿದಿರುತ್ತಾರೆ. ನಾನು 9 ನೇ ಪ್ರತಿವಾದಿಯಿಂದ ವಾದಿಯರಿಗೆ ಸ್ವತ್ತನ್ನು ಕೊಡಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.